ದಿನಾಂಕಃ **04-01-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಹೆಚ್.ಜೆ., ವಾದಿಯರ ಪರ ವಕೀಲರಿಂದಃ

11. ಯೋಗಿ ರುದ್ರಮಠದವರನ್ನು ಕರ್ಜಗಿ ಮಠಕ್ಕೆ ಉಸ್ತುವಾರಿ ಮಾಡಲು ಕಳುಹಿಸಿಕೊಟ್ಟಿರುತ್ತಾರೆ ಅಂದರೆ ಹೌದು. ಕರ್ಜಗಿ ಬಾವಮಠದ ಆಡಳಿತ ಮಂಡಳಿ ಮತ್ತು ಊರಿನವರ ತಕರಾರು ಆಗಿ ಅವರು ಹೊರಟು ಹೋಗಿರುತ್ತಾರೆ ಅಂದರೆ ಹೌದು. ಭೂತೇಶ್ವರ ಸ್ವಾಮೀಜಿಯವರು ಕಾಣೆಯಾದ ನಂತರ 7 ವರ್ಷಗಳಾದ ಮೇಲೆ ಸಿವಿಲ್ ನ್ಯಾಯಾಲಯದಲ್ಲಿ ಘೋಷಣೆ ದಾವೆ ಹಾಕಿ ಡಿಕ್ರಿ ಪಡೆದಿರುತ್ತೀರಿ ಅಂದರೆ ಹೌದು. ಆ ದಾವೆಯನ್ನು 5 ಜನರಾದ ಸಿದ್ದಪ್ಪ ಪುಟ್ಟಪ್ಪ ಬಾವೆದ, ಶಂಕರ ಯಲ್ಲಪ್ಪ ರಾವಳ, ಶಂಕರ ಕಾಶಿನಾಥ ಅಣಗಿ, ಗುರುನಾಥ ಸಿದ್ದಪ್ಪ ಅಣಗಿ, ಗುರುನಾಥ ಉಳವಪ್ಪ ಹೇಮಕರ ಇವರು ಮಾಡಿರುತ್ತಾರೆ. ಗುರುನಾಥ, ರಾವಳ, ಹೇಮಕರ ಇವರು ಯಾರು ಆ ದಾವೆಯಲ್ಲಿ ಪಕ್ಷಗಾರರು ಇರುವುದಿಲ್ಲ ಅಂದರೆ ಇರುವುದಿಲ್ಲ. ಆ ಎಲ್ಲಾ ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ಆ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಗುರುನಾಥ ಸಿದ್ದಪ್ಪ ಅಣಗಿ, ಗುರುನಾಥ ಉಳವಪ್ಪ ಹೇಮಕರ ಇವರಿಬ್ಬರ ಹೆಸರು ಮೃತ್ಯು ಪತ್ರದಲ್ಲಿ ನಮೂದು ಇರುವುದಿಲ್ಲ ಅಂದರೆ ಸಾಕ್ಷಿಯು ಅವರಿಬ್ಬರೂ ಮೃತು ಪತ್ರ ಬರೆಯುವಾಗ ಇರಲಿಲ್ಲ. ಮೃತ್ಯು ಪತ್ರದಲ್ಲಿ ಅವರ ಹೆಸರು ಇಲ್ಲದೇ ಇದ್ದರೂ ಕೂಡಾ ಅವರನ್ನು ಏಕೆ ಪಿ ಆ್ಯಂಡ್ ಎಸ್ ಸಿ ಪ್ರಕರಣದಲ್ಲಿ ಸೇರಿಸಿಕೊಂಡಿರುತ್ತೀರಿ ಅಂದರೆ ಅವರು ಕೇಳಿಕೊಂಡ ಮೇರೆಗೆ ಹಾಗೂ ಹೊಸ ಕಮೀಟಿಯಾಗಿದ್ದರಿಂದ ಅವರನ್ನು ಸೇರಿಸಿಕೊಂಡಿರುತ್ತೇವೆ. ನೀವು ಹೇಳುವ ಪ್ರಕಾರ ಕಮೀಟಿಗೆ ಮೃತ್ಯು ಪತ್ರವನ್ನು ಬರೆದಿರುವುದಿಲ್ಲ ಹೆಸರು ಹಾಕಿ ಬರೆದಿರುತ್ತಾರೆ ಅಂದರೆ ಬೈರೇಶ್ವರ ಕಮೀಟಿ ಅಂತಾ ಹೇಳಿ

ಮೃತ್ಯು ಪತ್ರದಲ್ಲಿ ನಮೂದು ಮಾಡಿರುತ್ತಾರೆ. ಈ ಕಮೀಟಿಯಲ್ಲಿ ಯಲ್ಲಪ್ಪ ಹನುಮಂತಪ್ಪ ಅಣಗಿ, ಬಾಬು ನಿಂಗಪ್ಪ ಅಣಗಿ ಇವರಿಬ್ಬರನ್ನು ಕೇಳಿಕೊಂಡ ಮೇರೆಗೆ ಮೃತ್ಯು ಪತ್ರದಲ್ಲಿ ಸೇರಿಸಿರುತ್ತೇನೆ. ಮೃತ್ಯು ಪತ್ರವನ್ನು ಬದಲಾವಣೆ ಮಾಡಲು ನಿಮಗೆ ಹಕ್ಕು ಇರುವುದಿಲ್ಲ ಅಂದರೆ ಹಕ್ಕು ಇರುವುದಿಲ್ಲ ಆದರೆ ಹೊಸದಾಗಿ ಕಮೀಟಿ ಮಾಡಿದಾಗ ಸೇರಿಸಿಕೊಂಡಿರುತ್ತೇವೆ. ಮೃತ್ಯು ಪತ್ರದಲ್ಲಿ ಇರುವವರನ್ನು ಪಿ ಆ್ಯಂಡ್ ಎಸ್ ಸಿ ಪ್ರಕರಣದಲ್ಲಿ ಸೇರಿಸಿಕೊಂಡಿರುವುದಿಲ್ಲ ಅಂದರೆ ಸದರಿಯವರು ತೀರಿಕೊಂಡಿದ್ದರಿಂದ ಅವರನ್ನು ಸೇರಿಸಿರುವುದಿಲ್ಲ ಅಂತಾ ನುಡಿಯುತ್ತಾರೆ. ಮೃತಪಟ್ಟಿರುತ್ತಾರೆ ಎಂಬ ವಿಷಯವನ್ನು ಪಿ ಆ್ಯಂಡ ಎಸ್ ಸಿ ಯಲ್ಲಿ ಹೇಳಿರುವುದಿಲ್ಲ ಅಂದರೆ ಇಲ್ಲಾ. ನೀವು ಹೇಳಿದ 5 ಜನರ ಸಿದ್ದಪ್ಪ ಬಾವಲಿ, ಕಲ್ಲಪ್ಪ ರಾವಳ, ಶಂಕರ ಅಣಗಿ, ಗುರುನಾಥ ಅಣಗಿ, ಗುರುನಾಥ ಉಳವಪ್ಪ ಹೇಮಕರ ಇವರ ಹೆಸರಿನಲ್ಲಿ ಮೃತ್ಯು ಪತ್ರ ಬರೆದುಕೊಟ್ಟಿದ್ದು ಪಿ ಆ್ಯಂಡ್ ಎಸ್ ಸಿ ಕೊಡಿ ಅಂತಾ ಪ್ರಕರಣ ದಾಖಲು ಮಾಡಿರುತ್ತೀರಾ ಅಂದರೆ 5 ಜನರು ಬೈರವನಾಥ ಕಮೀಟಿಯ ಸದಸ್ಯರಿರುತ್ತಾರೆ ಅಂತಾ ಸೇರಿಸಿರುತ್ತಾರೆ. ಈ ದಾವೆಯಲ್ಲಿ ಮೃತ್ಯು ಪತ್ರವನ್ನು ಹಾಜರಪಡಿಸಿರುತ್ತೀರಾ ಅಂದರೆ ವಾದಿಯರು ಕೇಳಿರುವುದಿಲ್ಲ ಆ ಕಾರಣಕ್ಕೆ ನಾನು ಹಾಜರಪಡಿಸಿರುವುದಿಲ್ಲ. ಪಿ ಆ್ಯಂಡ್ ಎಸ ಸಿ ಪ್ರಕರಣದಲ್ಲಿ ನೀವು ಹಾಜರಪಡಿಸಿರುವ ಮೃತ್ಯು ಪತ್ರದಲ್ಲಿ 6 ಮತ್ತು 7 ನೇ ಪುಟ ಇರುವುದಿಲ್ಲ ಅಂದರೆ ನಾವು ಪೂರ್ತಿ ದಾಖಲೆಯನ್ನೇ ಕೊಟ್ಟಿರುತ್ತೇವೆ. ಭೂತೇಶ್ವರ ಸ್ವಾಮೀಜಿಯವರು ಮೃತ್ಯು ಪತ್ರವನ್ನು ನಿಮ್ಮ ಕಮೀಟಿಯವರಿಗೆ ಬರೆದುಕೊಟ್ಟಿರುವುದಿಲ್ಲ ನೀವೆ ಸೃಷ್ಠಿ ಮಾಡಿಕೊಂಡಿರುತ್ತೀರಿ ಅಂದರೆ ಸರಿಯಲ್ಲ. ಕರ್ಜಗಿ ಮಠದ ಆಸ್ತಿಯನ್ನು ಎತ್ತಿ ಹಾಕುವ ಸಲುವಾಗಿ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೀರಿ ಅಂದರೆ ಸರಿಯಲ್ಲ. ಮೃತ್ಯು ಪತ್ರವನ್ನು ಯಾರ ಕೈಯಲ್ಲಿ ಕೊಟ್ಟಿರುತ್ತಾರೆ ಅಂತಾ ನೆನಪಿರುವುದಿಲ್ಲ. ನನಗೆ

ಕಮೀಟಿಯವರು ಮೃತ್ಯು ಪತ್ರವನ್ನು ಕೊಟ್ಟಿರುತ್ತಾರೆ ಅವರು ಯಾರು ಅಂತಾ ನೆನಪಿರುವುದಿಲ್ಲ. ಭೂತೇಶ್ವರನಾಥ ಮಹಾರಾಜರು ಮಠ ಬಿಟ್ಟು ಹೋಗುವ ಕಾಲಕ್ಕೆ 93 ವರ್ಷ ವಯಸ್ಸಾಗಿತ್ತು ಅಂದರೆ ಸರಿ. ಅವರು 93 ವರ್ಷವನ್ನು ಭೂತೇಶ್ವರ ನಾಥ ಸ್ವಾಮೀಜಿಯವರು ಕಳೆದಿದ್ದರಿಂದ ಅವರು ಆರೋಗ್ಯಕರವಾಗಿ ಸ್ವಾಸ್ಥರಾಗಿರಲಿಲ್ಲ ಅಂದರೆ ಸರಿಯಲ್ಲ. ನನಗೆ ಈಗ 80 ವರ್ಷ ನಿಮಗೆ ಸರಿಯಾಗಿ ಕಿವಿ ಕೇಳುವುದಿಲ್ಲ ಅಂದರೆ ಹೌದು. ನಿಮಗೆ ಕಿವಿ ಸರಿಯಾಗಿ ಕೇಳದೆ ಇರುವ ಕಾರಣ ಹಾಗೂ ಮಾನಸಿಕ ಅಸ್ವಸ್ಥ ಇರುವುದರಿಂದ ನಾವು ಕೇಳುವ ಪ್ರಶ್ನೆ ಸರಿಯಾಗಿ ಕೇಳುವುದಿಲ್ಲ ಅಂದರೆ ಸರಿಯಲ್ಲ. ಮೃತ್ಯು ಪತ್ರ, ಪಿ ಆ್ಯಂಡ್ ಎಸ್ ಸಿ ಆದೇಶ, ಅಸಲು ದಾವಾ ನಂಬರ 151/2007 ರ ದಾಖಲೆಗಳನ್ನು ಹಾಜರಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಅಂದರೆ ಇಲ್ಲಾ.

**12**. ದಾವಾಸ್ತಿಗಳು ಕರ್ಜಗಿ ಬಾವನ ಮಠದ ಆಸ್ತಿಗಳು ಅಂದರೆ ಸರಿಯಲ್ಲ. ಸ್ವಾಮೀಜಿಯವರ ಸ್ವಂತ ಆಸ್ತಿ. ಕರ್ಜಗಿಯ ಬ್ಯಾಂಕನಲ್ಲಿ ಇಟ್ಟಿರುವ ಎಫ್.ಡಿ. ಹಣ ಸ್ವಾಮೀ ಭೂತೇಶ್ವರನಾಥ ಮಹಾರಾಜ ಕರ್ಜಗಿ ಬಾವನಮಠ ಅಂತಾ ಹೆಸರಿನಲ್ಲಿ ಇರುತ್ತದೆ ಅಂದರೆ ಬಾವನಮಠ ಎಂಬುದು ಅಡ್ರೆಸ್ ಇದ್ದು ಅವರ ಪೂರ್ಣ ಹೆಸರು ಸ್ವಾಮೀ ಭೂತೇಶ್ವರನಾಥ ಮಹಾರಾಜ ಮಹೇಂದ್ರಕರ ಅಂತಾ ಇರುತ್ತದೆ. ಎಫ್.ಡಿ. ರಸೀದಿ ಹಾಜರಪಡಿಸಿರುವುದಿಲ್ಲ ಅಂದರೆ ಇಲ್ಲಾ. ಎಫ್.ಡಿ. ರಸೀದಿಯಲ್ಲಿರುವ ಹಣವನ್ನು ಕರ್ಜಗಿ ಬಾವನಮಠಕ್ಕೆ ಉಪಯೋಗಿಸಬೇಕು ಅಂತಾ ಪಿ ಆ್ಯಂಡ ಎಸ್ ಸಿ ಪ್ರಕರಣದಲ್ಲಿ ಆದೇಶವಿದೆ ಅಂದರೆ ಹೌದು. ಕರ್ಜಗಿ ಬಾವನಮಠಕ್ಕೆ ಹಣವನ್ನು ಉಪಯೋಗಿಸಬಾರದು ಎಂಬ ಉದ್ದೇಶದಿಂದ ನಿಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡು ಹೋಗುತ್ತಿದ್ದೀರಿ ಅಂದರೆ ಸರಿಯಲ್ಲ. ಅದಕ್ಕೆ ಕರ್ಜಗಿ ಗ್ರಾಮದ ಜನರು ವಿರೋದ ವ್ಯಕ್ತಪಡಿಸಿರುತ್ತಾರೆ ಅಂದರೆ ಸರಿಯಲ್ಲ. ಕರ್ಜಗಿ

ಬಾವನಮಠಕ್ಕೆ ಹಣವನ್ನು ಉಪಯೋಗಿಸುವುದಕ್ಕೋಸ್ಕರ ಆ ಮಠದ ಹೆಸರಿನಲ್ಲಿ ಬ್ಯಾಂಕನಲ್ಲಿ ಖಾತೆ ತೆರೆದಿರುತ್ತೀರಾ ಅಂದರೆ ಇಲ್ಲಾ.ಭೂತೇಶ್ವರನಾಥ ಮಹೇಂದ್ರಕರ ಇವರು ನಿಮ್ಮ ಕಮೀಟಿಗೆ ಯಾವುದೇ ಮೃತ್ಯು ಪತ್ರವನ್ನು ಬರೆಯದೇ ಇದ್ದರೂ ಸಹ ಅವರು ಊರು ಬಿಟ್ಟು ಹೋಗಿರುವುದನ್ನು ದುರುಪಯೋಗ ಪಡಿಸಿಕೊಂಡು ನಿಮ್ಮ ಕಮೀಟಿಯಲ್ಲಿ ಮೃತ್ಯು ಪತ್ರವನ್ನು ಸೃಷ್ಠಿ ಮಾಡಿಕೊಂಡು ಮಾನ್ಯ ನ್ಯಾಯಾಲಯಕ್ಕೆ ತಪ್ಪು ಮಾಹಿತಿಯನ್ನು ನೀಡಿ ಪಿ ಆ್ಯಂಡ್ ಎಸ್ ಸಿ ಪ್ರಕರಣದಲ್ಲಿ ಆದೇಶ ಪಡೆದಿರುತ್ತೀರಿ ಅಂದರೆ ಸರಿಯಲ್ಲ. ಬಾವನಮಠ, ಕರ್ಜಗಿ ಮಠದ ಆಸ್ತಿಯನ್ನು ನಿಮ್ಮ ಟ್ರಸ್ಟ ಕಮೀಟಿಗೆ ಉಪಯೋಗ ಮಾಡಲು ಯಾವುದೇ ಅಧಿಕಾರ ಇರುವುದಿಲ್ಲ ಅಂದರೆ ನಾವು ಬಳಕೆ ಮಾಡಿರುವುದಿಲ್ಲ. ನೀವು ಖೊಟ್ಟಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.